Doc-147
I-P-2

Regd No BG 155 10-9-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯವಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಸನಕೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಂಗಳೂರಿನಲ್ಲಿ ವಿದ್ಯಾರ್ಥಿ ಗಲಭೆ – ಅಶ್ರುವಾಯು ಪ್ರಯೋಗ

ದಾಖಲೆ ಓಟ

★

ಲಂಡನ್— ಇಂಗ್ಲೆಂಡಿನ ದೂರ ಓಟಗಾರ ಡಿಕ್ ಟ್ರೈಲರ್ 2010 ಮಿಟರುಗಳ ದೂರವನ್ನು 7 ನಿಮಿಷ 47.6 ಸೆಕೆಂಡುಗಳಲ್ಲಿ ಓಡಿದರು – ಈ ತಿಂಗಳು ಕಡೆಯಲ್ಲಿ ನಡೆಯುವ ಐರೋಪ್ಯ ಕ್ರೀಡೆಗಳಲ್ಲಿ ಭಾಗವಹಿಸಲಿರುವರು.

"ಸತ್ಯವಾದಿ" ಯ ಸ್ವರ್ಣೋತ್ಸವ

ಭಾನುವಾರ **28–9–1969**

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, 'ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ತಕ್ಕಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಲಾಠಿ, ಅಶ್ರುವಾಯು ಪ್ರಯೋಗ

ಬೆಂಗಳೂರು— ವಿದ್ಯಾರ್ಥಿಗಳ ಅಶಾಂತಿ ಸಮಸ್ಯೆ ಶಾಸನ ಸಭೆಯಲ್ಲಿ ನಿನ್ನೆ ಚರ್ಚೆ ಸಲ್ಪಡುತ್ತಿದ್ದಾಗ, ಬೆಂಗಳೂರು ವಿಶ್ವವಿದ್ಯಾನಿಲಯದ ಮೇಲೆ ಧಾಳಿನಡೆಸಿ ಕಾಗದ ಪತ್ರ, ಪೀಠೋಪಕರಣಗಳಿಗೆ ಬೆಂಕಿ ಇಟ್ಟ ವಿದ್ಯಾರ್ಥಿಗಳ ಭೀಕರ ಗುಂಪಿನ ಮೇಲೆ ಪೋಲೀಸರು ಅಶ್ರುವಾಯು ಪ್ರಯೋಗ ಮತ್ತು ಲಾಠಿಛಾರ್ಜು ಮಾಡಿದರು.

★

ಅಭಿವೃದ್ಧಿಯ ಅಸಮಾನತೆ

ಬೆಂಗಳೂರು— ಎಂ ಪಿ ಸಿ ಸಿ ಕಾರ್ಯಕಾರಿ ಮತ್ತು ಶಾಸನಸಭಾ ಕಾಂಗ್ರೆಸ್ ಪಾರ್ಟಿಯ ಜಂಟಿ ಸಭೆಯಲ್ಲಿ, ರಾಜ್ಯದಲ್ಲಿನ ಅಭಿವೃದ್ಧಿಯ ಅಸಮಾನತೆ ಬಗ್ಗೆ ವಿವರವಾದ ಚರ್ಚೆ ನಡೆಸಬೇಕೆಂದು ಸದಸ್ಯರು ಕೇಳಲು, ಅಧ್ಯಕ್ಷ ಡಾ|| ನಾಗಪ್ಪ ಆಳ್ವರು, ಮುಂದಿನ ಶಾಸನಸಭೆಗೆ ಮುಂಚೆ ಈ ರೀತಿ ಚರ್ಚೆಯ ಬಗ್ಗೆ ಭರವಸೆ ನೀಡಿದರು — ಸರಕಾರವು ಜನತಾ ಕುಂದುಕೊರತೆ, ಭೂ ಶಾಸನ ತಿದ್ದುಪಡಿ ವಿಷಯ, ಸಾಲ ಪರಿಹಾರ ಶಾಸನದಿಂದ ತಪ್ಪಿಸಿಕೊಳ್ಳುವ ವಿಷಯ ಮುಂತಾದ್ದನ್ನು ಸರ್ಕಾರ ಪರ್ಯಾಲೋಚಿಸಬೇಕೆಂದೂ ಹೇಳಿದರು.

ಫುಟ್‌ಬಾಲ್ ಆಟ ಸಂಬಂಧದ ಗೊಂದಲ

ದಕ್ಷಿಣ ಇಟಲಿ— ಕಾಸೆರ್ಟಾ ಟೀಮನ್ನು, ಒಸಿಲಿ ಟೀಂ ಆಟಗಾರನೊಬ್ಬನಿಗೆ ಲಂಚ ಕೊಟ್ಟ ಆಪಾದನೆಗೆ ಫುಟ್‌ಬಾಲ್ ಸಂಘದವರು ಈ ಟೀಮನ್ನು ಮೂರನೇ ವಿಭಾಗಕ್ಕೆ ಹಾಕಿದ್ದನ್ನು ಪ್ರತಿಭಟಿಸಿ, ಆ ಟೀಮಿನ ಪ್ರೇಮಿಗಳು ಕುಪಿತರಾಗಿ ರಸ್ತೆಗಳನ್ನು ಅಡ್ಡಕಟ್ಟಿ, ರೈಲುಗಳನ್ನು ನಿಲ್ಲಿಸಿ ಕ್ರೀಡಾ ಕೇಂದ್ರವನ್ನು ಆಕ್ರಮಿಸಿದರು – ಕಚೇರಿಗಳೂ ಅಂಗಡಿಗಳೂ, ಪುರಭವನ ಮುಚ್ಚಲ್ಪಟ್ಟಿದ್ದವು – ರಸ್ತೆಯಲ್ಲಿ ಓಡಾಡುತ್ತಿದ್ದ ಬಸ್ಸು ಕಾರು ಲಾರಿಗಳ ಟೈರುಗಳನ್ನು ಪಂಕ್ಚರ್ ಮಾಡಿದರು – ಕಡೆಗೆ ಫುಟ್‌ಬಾಲ್ ಪ್ರೇಮಿಗಳಿಗೂ ಘರ್ಷಣೆಯಾಗಿ ಅಶ್ರುವಾಯು ಪ್ರಯೋಗಿಸಲಾಯಿತು.

★

ಕಾಂಗ್ರೋದಲ್ಲಿನ ಭಾರತೀಯರು

ನವದೆಹಲಿ— ಕಾಂಗೊ 500 ಭಾರತೀಯ ಸಂಸಾರಗಳನ್ನು ದೇಶದಿಂದ ಹೊರದೂಡಿದೆ.

★

ಉಪಾಧ್ಯಾಯರ ಮುಷ್ಕರ

ಕಟಕ್— ವಿದ್ಯಾರ್ಥಿಗಳ ಚಳವಳದ ಜೊತೆಗೆ ಸರ್ಕಾರೇತರ ಸ್ಕೂಲುಗಳ ಉಪಾಧ್ಯಾಯರು ತಮ್ಮ ಕೇಳಿಕೆಗಾಗಿ ತರಗತಿಗಳನ್ನು ಬಹಿಷ್ಕರಿಸಿರುವರು.

ಕಾಂಗ್ರೆಸ್ ಅಧ್ಯಕ್ಷತೆ ಬಿಡಲಿ

ಪೂನಾ— ಪ್ರಧಾನಿ ಇಂದಿರಾರವರ, ಸರವಾಗಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ತಮ್ಮ ಸ್ಥಾನವನ್ನು ಬಿಡಲು ಲೋಕಸಭಾ ಡೆಪ್ಯೂಟಿಸ್ಪೀಕರ್ ಶ್ರೀ ಖಾಡಿಲ್ಕರ್‌ರವರು ಸಲಹೆ ಮಾಡಿದ್ದಾರೆ.

○

ಅಭಿವೃದ್ಧಿ ಕಾರ್ಯಗಳು

ಬೆಂಗಳೂರು— 1956 ನವೆಂಬರಿನಲ್ಲಿ ಆದ ಪುನರ್ವಿಂಗಡಣೆಯಿಂದ, ಮೈಸೂರು ರಾಜ್ಯದಲ್ಲಿನ ವಿವಿಧ ಭಾಗಗಳಲ್ಲಾಗಿರುವ ಅಭಿವೃದ್ಧಿ ಕಾರ್ಯಗಳು ಮುಂತಾದವರ ಬಗ್ಗೆ ಅಂಕಿಅಂಶಗಳು ಶಾಸನ ಸಭೆಯಲ್ಲಿ ಇಡಲಾಯಿತು.

★

ಗಾಂಧೀಜಿ ಕುರಿತ ಪುಸ್ತಕಗಳು

ನವದೆಹಲಿ— ಲೈಬೀರಿಯಾದಲ್ಲಿನ ಭಾರತದ ರಾಯಭಾರಿಯವರು ಮೊನ್ರೋವಿಯಾದ ಮೇಯರರಿಗೆ ಗಾಂಧೀಜಿಯವರನ್ನು ಕುರಿತ ಪುಸ್ತಕಗಳ ಸಂಗ್ರಹವನ್ನು ಇತ್ತೀಚೆಗೆ ಉಡುಗೆರೆಯಾಗಿ ನೀಡಿದರು.

★

ವಿದ್ಯಾರ್ಥಿಗಳ ಮುಷ್ಕರ

ಮಂಗಳೂರು— ಶಿಕ್ಷಣ ಶುಲ್ಕ, ಹಾಸ್ಟಲು ಬಾಡಿಗೆ ತಗ್ಗಿಸಬೇಕೆಂದು ಮಣಿಪಾಲ್ ಕಸ್ತೂರಿಬಾ ಮೆಡಿಕಲ್ ಕಾಲೇಜಿನ 800 ವಿದ್ಯಾರ್ಥಿಗಳು ಸೋಮವಾರದಿಂದ ಮುಷ್ಕರ ಹೂಡಿರುವರು.

○

ಟಿಮೇನಿಯ— ನಿಲ್ಲದೆ ಓಡುವ ದಾಖಲೆಯನ್ನು 41 ವರ್ಷದ ಅಮೇರಿಕ್ ಜೋರ್ಡ್ ಬೀಡ್ ಸ್ಥಾಪಿಸಿರುವನು – 120 ಮೈಲಿ 440 ಗಜಗಳ ದೂರವನ್ನು 20 ಗಂಟೆ 27 ನಿಮಿಷಗಳಲ್ಲಿ ಓಡಿದನು.

ದಿವ್ಯವಾಣಿ

ಎಲ್ಲ ರಾಜಕೀಯ ಪಕ್ಷಗಳು ಕಟ್ಟಕಡೆಗೆ ತಮ್ಮ ಸ್ವಂತ ಸುಳ್ಳುಗಳನ್ನೇ ನುಂಗುತ್ತಾ ಸಾಯುವವು. – ಜಾರ್ಜ್ ಬರ್ನಾಡ್ ಷಾ

ತಾ.12–9–69ನೇ ಶುಕ್ರವಾರದಿಂದ ಆನೋಘ
... ದಿನ 3 ಆಟಗಳು .... – ಪ್ರಾರಂಭ
ಒಲಿಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ
ದಿನ : 2–30, 6 ಮತ್ತು 9–30 ಕ್ಕೆ ದಿನ : 3, 6–30, 10 ಕ್ಕೆ
ಮೆಹಮೂದ್ ಭೀಮ್‌ಸಿಂಗ್ ಪ್ರೊಡಕ್ಷನ್ಸ್‌ರವರ
ಅತ್ಯುತ್ತಮ ಸಂಗೀತಭರಿತ, ಹಾಸ್ಯಮಯ ವರ್ಣರಂಜಿತ ಚಿತ್ರ
ಸಾಧು ಔರ್ ಶೈತಾನ್
ಪಾತ್ರ : ಮೆಹಮೂದ್ ಭಾರತಿ, ಪ್ರಾಣ್, ಓಂಪ್ರಕಾಶ್, ಕಿಶೋರ್‌ಕುಮಾರ್
ಸಂಗೀತ : ಲಕ್ಷ್ಮೀಕಾಂತ್ ಪ್ಯಾರೇಲಾಲ್ – ನಿರ್ದೇಶನ : ಎ. ಭೀಮ್‌ಸಿಂಗ್

ಸಂಕೀರ್ತನೆ ಪ್ರತಿಪಾದಿಸುವ ಮುಸ್ಲಿಂ ಕವಿ

ಪೂರ್ವ ಪಾಕಿಸ್ಥಾನದ ಕವಿ ಜಸಿಮುದ್ದೀನರಿಗೆ ಕಲ್ಕತ್ತಾ ಕಾರ್ಪೊರೇಷನ್ನಿನಲ್ಲಿ ಕೆಲವು ದಿನಗಳ ಹಿಂದೆ ನಡೆದ ಸನ್ಮಾನ ಸಮಾರಂಭದಲ್ಲಿ, ಮೇಯರರು ಆ ಪ್ರಖ್ಯಾತ ಕವಿಯವರನ್ನು ಅಭಿನಂದಿಸಿ ಬಿನ್ನವತ್ತಳೆ ಅರ್ಪಿಸಿದರು. ಕವಿಯವರು ಉತ್ತರಿಸುತ್ತಾ — ಎಲ್ಲಾ ಪಾಠಶಾಲೆಗಳಲ್ಲೂ "ಸಂಕೀರ್ತನೆ" ಯನ್ನು ಭೋದಿಸುವಂತೆ ಕಾರ್ಪೊರೇಷನ್ನಿಗೆ ತಿಳುವಳಿಕೆ ಕೊಟ್ಟರು. ಕವಿ ಸಚ್ಚಿದಾನಂದ್ರನಾಥರ ಪ್ರಖ್ಯಾತ ಸಂಗೀತಗಳನ್ನು ತಿಳಿಸಿದರು— ಪೂರ್ವ ಬಂಗಾಳಾ ಕಡೆಯಲ್ಲಿ "ನೇಮಾಯ್ಯಾ" (ಚೈತನ್ಯದೇವ) ಅನ್ನುವ ಉತ್ಪಾದಿಸಲಾಯಿತು : ಕೀರ್ತನೆಯ ಮೂರ್ತಿವತ್ತಾಗಿದ್ದು ಹೆಚ್ಚಿಚ್ಚು ಕೀರ್ತನೆ ಜಾರಿಗೆ ತಂದರು ಎಂದು ತಿಳಿಸಿ, ಹೀಗೆ ಮಾಡಿದರೆ ವಿದ್ಯಾರ್ಥಿಗಳು ಕೆಂಪು ಬಾವುಟ ಹಿಡಿದು ಸುತ್ತಾಡುವುದು ತಪ್ಪುವುದೆಂದು ಹೇಳಿದರು.

ಇದನ್ನು ಕೇಳಿದ ಸಭಿಕರಿಗೆ ಡುಗುಬಡಿದಂತಾಯಿತು. ಆದರೂ ಒಬ್ಬ ಮಹಮದೀಯ ಕವಿಯು ನಾಸ್ತಿಕತೆಗೆ ಪರಿಹಾರವಾಗಿ ಸಂಕೀರ್ತನೆ ಪ್ರತಿಪಾದಿಸಿದ್ದನ್ನು ಕೇಳಿದ ಕಾರ್ಪೊರೇಷನ್ನಲ್ಲಿ ಬಹುಸಂಖ್ಯಾತರಾದ ಕಮ್ಯುನಿಸ್ಟರೂ, ಅವರಲ್ಲಿನವರೇ ಆದ ಮೇಯರರೂ ದಿಗ್ಭ್ರಮೆಯಿಂದ ಗಾಬರಿಗೊಂಡರು.

ಈ ಸ್ವಾರಸ್ಯ ಸಂದರ್ಭವು ಕಾರ್ಪೊರೇಷನ್ನಿನ ಅಪೂರ್ವ ಸಂಘಟನೆಯೆಂದು ವರ್ಷಾಂತರಗಳಲ್ಲಿ ಸ್ಮರಿಸಿಕೊಳ್ಳಲಾಗುತ್ತದೆ

ಈ ತಿಳುವಳಿಕೆ ಮಾತನ್ನು ಭಾರತ ಸರಕಾರ ಅನುಸರಿಸಿದ್ದರೆ, ದೇಶದ ಶೋಕೆಯೇ ಬದಲಾವಣೆಯಾಗುತ್ತಿತ್ತು. ತನ್ನ ಮಕ್ಕಳಿಗೆ ಧಾರ್ಮಿಕ ತರಬೇತಿಲ್ಲದೆ ಒಂದು ದೇಶವು ಎಲ್ಲ ನೈತಿಕ ಆಧಾರವಿಲ್ಲದ್ದಯೌವನಸ್ಥ ಪುರುಷರನ್ನೂ ಸ್ತ್ರೀಯರನ್ನೂ ಒಳಗೊಂಡ ದೇಶವಾಗಿರುತ್ತೆ : ಫಲಿತಾಂಶ ಯೋಚಿಸಲು ಭಯಾನಕವಾಗಿರುತ್ತೆ. ಕಮ್ಯುನಿಸ್ಟ್ ದೇಶಗಳಲ್ಲಿ ಧಾರ್ಮಿಕ ತರಬೇತಿಲ್ಲದಿದ್ದರೂ, ಕಠಿಣ ಶಿಸ್ತು ಇದೆ ಮತ್ತು ಯೋಚನೆಯ ಸ್ವಾತಂತ್ರ್ಯದಲ್ಲಿ ಅವಿವೇಕವಿಲ್ಲದಿದ್ದು, ಇವು ಬಹುಮಟ್ಟಿಗೆ ಧಾರ್ಮಿಕ ತರಬೇತಿಲ್ಲದ್ದನ್ನು ಪರಿಪಡಿಸುತ್ತದೆ.

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪಾಲನೆದಯಾ ಕಾರ್ಯಗಳಿಗೆ ಹೆಚ್ಚಿಚ್ಚಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

ವುಡ್‌ಲಾಂಡ್ಸ್ ತಾ. **5—9—69** ರಿಂದ ಅಮೋಘ ಪ್ರಾರಂಭ

— ಆತ್ಯಾಕರ್ಷಣೀಯ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್ ಮದನಪುರಿ, ಶಬ್ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೇರಾ 5-9-69 ರಿಂದ

.... ಚಿತ್ತಾಕರ್ಷಕ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ ....

ಮಹಲ್

ಪಾತ್ರ— ದೇವಾನಂದ್, ಆಶಾ ಪರಾಖ್, ಅಭಿ ಭಟ್ಟಾಚಾರ್ಯ ಡೇವಿಡ್, ಅಜಾ, ಸುಧಿರ್

ದಿಗ್ದರ್ಶನ— ಶೇಖರ್ ಮುಖರ್ಜಿ ಸಂಗೀತ— ಕಲ್ಯಾಣ್‌ಜಿ ಆನಂದ್‌ಜಿ

ದಿನ 3 ಆಟಿಗಳು

Golden Jubilee of 'Satyavadi'

Sunday 28—9—1969

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4